## ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ವಾರ್ಡ್ ಸಮಿತಿ ಸಭೆ ನಡವಳಿಗಳು

ಶ್ರೀ. ನಿಶಾಂತ್ ನೋಡಲ್ ಅಧಿಕಾರಿ ಯರವರ ಘನ ಅಧ್ಯಕ್ಷತೆಯಲ್ಲಿ ದಿ: 02.01.2021 ರಂದು ಮಧ್ಯಾಹ್ನ ಬಾಪೂಜಿನಗರ ವಾರ್ಡ್ ಸಂಖ್ಯೆ: 134 ರ ಸಮಿತಿ ಸಭೆಯನ್ನು ನಡೆಸಲಾಯಿತು. ಸಮಿತಿಗೆ ಕೆಳಕಂಡ ಸದಸ್ಯರು ಹಾಜರಿರುತ್ತಾರೆ.

### ಸಭೆಗೆ ಹಾಜರಿದ್ದ ಅಧಿಕಾರಿಗಳು

| ಕ್ರಸಂ | ಹೆಸರು | ಹುದ್ದೆ |
|---|---|---|
| 1. | ಶ್ರೀ. ನಿಶಾಂತ್ ನೋಡಲ್ ಅಧಿಕಾರಿ | ಅಧ್ಯಕ್ಷರು. |
| 2. | ಶ್ರೀ. ಬಿ.ಸಿ. ಶಿವಣ್ಣ ಸ.ಅ | ಕಾರ್ಯದರ್ಶಿ. |
| 3. | ಶ್ರೀ. ಶಿವಕುಮಾರ್ | ಕಂ.ಪ |
| 4. | ಶ್ರೀ. ಜಗದೀಶ್ | ಹಿ.ಆ.ಪ |
| 5. | ಶ್ರೀಮತಿ. ಸವಿತ | JHI |
| 6. | ಶ್ರೀ. ದೊಡ್ಡವೀರಪ್ಪ ಸ.ಅ | BWSSB |
| 7. | ಶ್ರೀ. ಅರುಣ್ ಕುಮಾರ್ ಸ.ಅ | ಬೆಸ್ಕಾಂ |
| 8. | ಶ್ರೀ. ಬಿ.ಎಸ್ ಗಣೇಶ್ | ಎ.ಎಸ್.ಐ |
| 9. | ಶ್ರೀ.ಯಶ್‌ವಂತ್ ರಾವ್ | ಸಾರ್ವಜನಿಕರು |
| 10. | ಶ್ರೀ. ಕೆ.ಎಲ್. ಉಮೇಶ್ | ಕೆ.ಪ |

ವಾರ್ಡಿನ ಕಾರ್ಯದರ್ಶಿಗಳಾದ ಶ್ರೀ.ಬಿ.ಸಿ.ಶಿವಣ್ಣ ರವರು ಅಧ್ಯಕ್ಷರನ್ನೂ ಹಾಗೂ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು.

**HEALTH**

ಕೋವಿಡ್-19 Testing ಬಗ್ಗೆ ಚರ್ಚಿಸಲಾಯಿತು. ಶ್ರೀ.ಜಗದೀಶ್ (ಹಿ.ಆ.ಪ) ರವರು ಕೋವಿಡ್-19 Testing ಬಗ್ಗೆ ವಿವರಿಸಿದರು. ಇದುವರೆಗೂ 462 Case ಗಳು ಪತ್ತೆಯಾಗಿದೆ. ಇದುವರೆಗೂ 398 ಜನರು Discharge ಆಗಿದ್ದಾರೆ. ಮನೆಯಲ್ಲಿ 201 ಜನರು ಚಿಕಿತ್ಸೆ ಪಡೆಯುತ್ತಿದ್ದಾರೆ. ಈಗ 7 ಜನರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದುವರೆಗೂ 24 ಜನರು ಮರಣ ಹೊಂದಿರುತ್ತಾರೆ ಈಗ 13 Active Case ಗಳು ಇರುತ್ತದೆ. ಪ್ರತಿದಿನ ವಾರ್ಡ್‌ನ ಯಾವುದಾದರೂ ರಸ್ತೆಯಲ್ಲಿ ಒಂದು ಕಡೆ. ಕೋವಿಡ್-19 Testing ನಡೆಸುತ್ತಿರುವುದಾಗಿ ವಿವರಿಸಿದರು. Dry run Meeting ಈ ದಿನ ಇರುತ್ತದೆ.

**BWSSB**

- ಶ್ರೀ.ಯಶ್‌ವಂತ್ ರಾವ್ ರವರು ಬಾಪೂಜಿನಗರ 4ನೇ ಅಡ್ಡರಸ್ತೆಯಲ್ಲಿ Manhole ಮತ್ತು ಭೂಗತ ಕೊಳವೆಯ ವ್ಯಾಸವನ್ನು ಹೆಚ್ಚಿಸಿ ಕೊಳವೆಯನ್ನು ಅಳವಡಿಸಿಕೊಡಬೇಕೆಂದು ಕೋರಲಾಗಿ, ಅದನ್ನು ಸರಿಪಡಿಸಿಕೊಡುವುದಾಗಿ ಶ್ರೀ.ದೊಡ್ಡವೀರಪ್ಪ ಸ.ಅ (BWSSB) ಸಭೆಗೆ ತಿಳಿಸಿದರು
- ಬಾಪೂಜಿನಗರದ 3ನೇ ಕ್ರಾಸ್, 4ನೇ ಕ್ರಾಸ್ ಮತ್ತು 5ನೇ ಕ್ರಾಸ್‌ಗಳಿಗೆ Mini Water tank ನಿಂದ ನೀರು ಸರಬರಾಜು ಸಮರ್ಪಕವಾಗಿ ಅಗುತ್ತಿಲ್ಲ. 5ನೇ ಕ್ರಾಸ್‌ನ ಬೋರ್‌ವೆಲ್‌ನಿಂದ ಉಳಿದ Mini Water tank ಗಳಿಗೆ ಕೊಳವೆಯನ್ನು ಅಳವಡಿಸಿ ಸಮಸ್ಯೆಯನ್ನು ಪರಿಹರಿಸಿಕೊಡಬೇಕೆಂದು ಶ್ರೀ.ಯಶ್‌ವಂತ್ ರಾವ್ ರವರು ಕೋರಲಾಗಿ ಕಾರ್ಯದರ್ಶಿರವರು ಪರಿಶೀಲಿಸಿ ನೀರಿನ ಸಮಸ್ಯೆಯನ್ನು ಪರಿಹರಿಸಿಕೊಡುವುದಾಗಿ ಸಭೆಗೆ ತಿಳಿಸಿದರು

**REVENUE**

- ಶ್ರೀ.ಶಿವಕುಮಾರ್ RI ರವರು Tax Collection ಬಗ್ಗೆ ವಿವರಿಸಿದರು ಹಿಂದಿನ ಪಾಕ್ಷಿಕದಲ್ಲಿ ಅಂದಾಜು ರೂ: 4.38 ಲಕ್ಷಗಳು ತೆರಿಗೆ ಸಂಗ್ರಹಿಸಿರುವುದಾಗಿ ತಿಳಿಸಿದರು.
- ಬೆಂಕಿ ಅವಘಡದ ಉದ್ಯಮದ ಅಕ್ಕಪಕ್ಕದ ಕಟ್ಟಡಗಳ ಮಾಲೀಕರುಗಳಿಗೆ ಪರಿಹಾರವನ್ನು ಸ್ವಲ್ಪವಾಗಿ ಪರಿಹರಿಸಿಕೊಡುವುದಾಗಿ ಮಾಲೀಕರು ತಿಳಿಸಿರುವುದಾಗಿ RI ರವರು ಸಭೆಯಗೆ ತಿಳಿಸಿದರು.

**SWM**

- ಶ್ರೀಮತಿ.ಸವಿತ (ಕಿ.ಆ.ಪ) ರವರು ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ವಿವರಿಸಿದರು. ವಾರ್ಡ್‌ನಲ್ಲಿ ಮನೆಮನೆಯ ಕಸವನ್ನು ಸಂಗ್ರಹಿಸಿ Compactor ಮೂಲಕ ಘನತ್ಯಾಜ್ಯವು ಸಮರ್ಪಕವಾಗಿ ವಿಲೇವಾರಿಯಾಗುತ್ತಿದೆ.
- ಉಳಿದ Silt & Debris ಗಳನ್ನು Tractor ಮೂಲಕ ತೆರವುಗೊಳಿಸಿ ಕೊಡಬೇಕೆಂದು ಕಾರ್ಯದರ್ಶಿರವರನ್ನು ಕೋರಿದರು.

**TRAFFIC POLICE**

ವಾರ್ಡ್‌ನ ಸುಮಾರು ರಸ್ತೆಗಳಲ್ಲಿ ವಾಹನಗಳನ್ನು ನಿಲ್ಲಿಸಿ ವಾಹನಗಳ ಮಾಲೀಕರುಗಳು ಒಂದು ರಸ್ತೆಯಲ್ಲಿ ವಾಸಿಸುತ್ತಿದ್ದು, ಬೇರೆರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಾರೆ. ಇದರಿಂದ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ಹಿಂದಿನ ಸಭೆಯಲ್ಲಿ ಸ್ಥಳೀಯ ವೈದ್ಯಾಧಿಕಾರಿಗಳು ದೂರಿದ್ದರು.

ಪೋಲೀಸ್ ಇಲಾಖೆಯ ಶ್ರೀ.ಟಿ.ಎಸ್ ಗಣೇಶ್ ಎ.ಎಸ್.ಐ ರವರು ತಕ್ಷಣ ಕ್ರಮಕೈಗೊಂಡು 2ನೇ ಮುಖ್ಯರಸ್ತೆಯಲ್ಲಿ ನಿಲುಗಡೆ ಮಾಡಿದ್ದ ವಾಹನಗಳನ್ನು ತೆರವುಗೊಳಿಸಿದರು.

Underpass ನಲ್ಲಿ ನಿಲುಗಡೆ ಮಾಡಿದ್ದ ವಾಹನಗಳಿಗೆ Tag ಗಳನ್ನು ಅಂಟಿಸಲಾಗಿರುತ್ತದೆ ಅದನ್ನು ತೆರವುಗೊಳಿಸಲು ತಕ್ಷಣವೆ ಕ್ರಮಕೈಗೊಳುವುದಾಗಿ ತಿಳಿಸಿದರು.

**LAW AND ORDER POLICE**

ವಾರ್ಡ್ ಕಛೇರಿಯ ಸುತ್ತಮುತ್ತ ಹುಡುಗರು ಸೇರುತ್ತಿರುತ್ತಾರೆ. ಅವರು ಅನೈತಿಕ ಚಟುವಟಿಕೆಗಳನ್ನು ನಡೆಸದಂತೆ ಪರಿಶೀಲಿಸಿ ಎಚ್ಚರಿಸಬೇಕೆಂದು ಹಾಗು ಪೋಲೀಸ್ ಇಲಾಖೆಗೆ ತಿಳಿಸಿ ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಜಾರಾಗುವಂತೆ ತಿಳಿಸಲು ಕಾರ್ಯದರ್ಶಿರವರಿಗೆ ಸೂಚಿಸಿದರು. ಸಿ.ಸಿ ಕ್ಯಾಮರಗಳು ಕಾರ್ಯನಿರ್ವಹಿಸುತ್ತಿಲ್ಲವೆಂದು ಶ್ರೀ.ಯಶ್‌ವಂತ್ ರಾವ್ ರವರು ದೂರನ್ನಿತ್ತರು. ಪೋಲೀಸ್ ಇಲಾಖೆ ಯವರೊಂದಿಗೆ ಚರ್ಚಿಸಿ ಮುಂದಿನ ಸಭೆಯೊಳಗೆ ಸಮಸ್ಯೆ ಪರಿಹರಿಸುವುದಾಗಿ ಅಧ್ಯಕ್ಷರು ತಿಳಿಸಿದರು

ಮೇಲೆ ಸೂಚಿಸಿರುವ ಎಲ್ಲಾ ಆದೇಶಗಳನ್ನು ಪಾಲಿಸಿ ವರದಿಯನ್ನು ಸಲ್ಲಿಸುವುದಾಗಿ ಕಾರ್ಯದರ್ಶಿ ರವರು ತಿಳಿಸಿದರು.
ವಂದನಾರ್ಪಣೆಯನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಬೆಂಗಳೂರು.
ದಿ: 02.01.2021

2/01/2021

ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರು
ವಾರ್ಡ್ ಸಂ: 134.